ಬೀದರ್‌ನ ಪ್ರಮುಖ ರಸ್ತೆಗಳಲ್ಲಿ ಬುಧವಾರ ನಡೆದ ಚೌಬಾರಾದ ಪಾಂಡುರಂಗನ ಅದ್ದೂರಿ ... ಉತ್ಸವದಲ್ಲಿ

21-7-2016

# ಅಂತ್ಯೋದಯ ಯೋಜನೆ ಕಾರ್ಯಾಗಾರ

**ವಿಕ ಸುದ್ದಿಲೋಕ**, ಬೀದರ್

ನಗರಸಭೆ ಕಾರ್ಯಾಲಯದಲ್ಲಿ ಬುಧವಾರ ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಯೋಜನೆಯಡಿ ದೀನ ದಯಾಳ ಅಂತ್ಯೋದಯ ಯೋಜನೆ ರಾಷ್ಟ್ರೀಯ ನಗರಜೀವನೋಪಯಗಳ ಅಭಿಯಾನ ಕುರಿತು ಕಾರ್‍ಯಗಾರ ನಡೆಯಿತು.

ಡಿಯುಡಿಸು ಯೋಜನಾ ನಿರ್ದೇಶಕ ಬಲಭೀಮ ಕಾಂಚಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಾಗಾರಕ್ಕೆ ಚಾಲನೆ ನೀಡಿದರು.

ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಬೋಧಕರು ಹಾಗೂ ಕಾರ್ಯಾಗಾರದ ಸಂಯೋಜಕ ಅಶೋಕ ಸಿ ಅವರು, ಡಿಎವೈ-ಎನ್‌ಯುಎಲ್‌ಎಂ ಸೇರಿದಂತೆ ವಿವಿಧ ಕಾರ್‍ಯಕ್ರಮಗಳ ಬಗ್ಗೆ ಹಾಗೂ ನಗರ ವಸತಿಹೀನರಿಗೆ ಆಶ್ರಯ ಯೋಜನೆ, ನಗರ ಬೀದಿ ವ್ಯಾಪಾರಿಗಳಿಗೆ ಹಾಗೂ ಸಂಘ ಸಂಸ್ಥೆ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶ ಸಮುದಾಯ ಅಭಿವೃದ್ಧಿ ತಜ್ಞ ಭೀಮಣ್ಣಾ ಸಾಮಾಜಿಕ ಕ್ರೋಡೀಕರಣ ಮತ್ತು ಸಂಸ್ಥೆಯ ಅಭಿವೃದ್ಧಿ ಕೌಶಲಗಳ ತರಬೇತಿ ಮೂಲಕ ಉದ್ಯೋಗ ಕುರಿತು ಮಾತನಾಡಿದರು. ನಂತರ ನಗರಸಭೆ ಸಂಘಟನಾಧಿಕಾರಿ ಮಾರ್ಕ್ ಸ್ವಯಂ ಉದ್ಯೋಗ ಕಾರ್‍ಯಕ್ರಮ ಕುರಿತು ತಿಳಿಸಿದರು.

ಪೌರಾಯುಕ್ತ ಬಿ.ಬಸಪ್ಪಾ, ಲೀಡ್ ಬ್ಯಾಂಕ್ ಅಧಿಕಾರಿ, ಡಿಯುಡಿಸಿ ಸಿಡಿಓ ಭೀಮಣ್ಣಾ, ಎಸ್ ಎಚ್‌ಜಿ ಸದಸ್ಯರು ಹಾಗೂ ಕವಿತಾ ಹುಷಾರೆ, ಮೀನಾ ಬೋರಾಳಕರ್ ಮತ್ತಿತರರು ಇದ್ದರು.



ಬೀದರ್‌ನ ನಗರಸಭೆ ಕಾರ್ಯಾಲಯದಲ್ಲಿ ದೀನ ದಯಾಳ ಅಂತ್ಯೋದಯ ಯೋಜನೆ ರಾಷ್ಟ್ರೀಯ ನಗರಜೀವನೋಪಾಯಗಳ ಅಭಿಯಾನ ಕುರಿತು ಬುಧವಾರ ನಡೆದ ಕಾರ್ಯಾಗಾರದಲ್ಲಿ ಡಿಯುಡಿಸು ಯೋಜನಾ ನಿರ್ದೇಶಕ ಬಲಭೀಮ ಕಾಂಚಿ ಮಾತನಾಡಿದರು. ಕಾರ್ಯಾಗಾರದ ಸಂಯೋಜಕ ಅಶೋಕ ಸಿ ಇದ್ದರು.

Bidar

## ಅಂಗನವಾಡಿ ನೇಮಕ ಅಕ್ರಮ: ಆರೋಪ

**ಔರಾದ್:** ಪಟ್ಟಣದ ಲೀಡಕರ್ ಕಾಲೋನಿಯ ಅಂಗನವಾಡಿ ಸಹಾಯಕ ಹುದ್ದೆ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಸುನೀತಾ ಭಾಸ್ಕರ ಎನ್ನುವವರು ದೂರಿದ್ದು, ನೇಮಕಾತಿ ಸಂಪೂರ್ಣ ತನಿಖೆ ನಡೆಸುವಂತೆ ತಾಪಂ ಉಪಾಧ್ಯಕ್ಷ ನೆಹರು ಪಾಟೀಲ ಶಿಶು ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದ್ದಾರೆ.

ಸುನೀತಾ ಭಾಸ್ಕರ ಎನ್ನುವವರು ಜು. 15ರಂದು ಲಿಖಿತ ರೂಪದಲ್ಲಿ ಉಪಾಧ್ಯಕ್ಷರಿಗೆ ಮನವಿ ಸಲ್ಲಿಸಿದ್ದು, ಅಂಗನವಾಡಿಯಲ್ಲಿ ಖಾಲಿ ಇದ್ದ ಸಹಾಯಕಿ ಹುದ್ದೆಗೆ ಬಾಲಿಕಾ ಸೂರ್ಯಕಾಂತ ಅವರನ್ನು ಕಾನೂನು ಬಾಹಿರವಾಗಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಉಪಾಧ್ಯಕ್ಷರಿಗೆ ನೀಡಿದ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ದೂರು ಸ್ವೀಕರಿಸಿದ ತಾಪಂ ಉಪಾಧ್ಯಕ್ಷ, ಅಂಗನವಾಡಿ ನೇಮಕಾತಿಯಲ್ಲಿ ನಡೆದ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ಅಂಗನವಾಡಿ ನೇಮಕಾತಿಗೆ ಯಾವ ಮಾನದಂಡ ಬಳಸಲಾಗಿದೆ ಹಾಗೂ ಅಂಗನವಾಡಿ ನೇಮಕಾತಿಯಲ್ಲಿ ಯಾವ ದಾಖಲೆಗಳನ್ನು ಪಡೆಯಲಾಗಿದೆ ಎನ್ನುವುದನ್ನು 2 ದಿನದಲ್ಲಿ ಖುದ್ದಾಗಿ ಸಲ್ಲಿಸುವಂತೆ ಶಿಶು ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದ್ದಾರೆ. ಇನ್ನು ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕ ಹುದ್ದೆಗೆ ನೇಮಕ ಮಾಡಿಕೊಂಡ ಬಗ್ಗೆ ಸಂಪೂರ್ಣ ವಿವರ 2 ದಿನದಲ್ಲಿ ಸಲ್ಲಿಸುವಂತೆ ತಾಪಂ ಉಪಾಧ್ಯಕ್ಷ ನೇಹರು ಪಾಟೀಲ ಅಧಿಕಾರಿಗೆ ತಾಕಿತು ಮಾಡಿದ್ದಾರೆ.

# ಅಂತ್ಯೋದಯ ಲಾಭ ಜನರಿಗೆ ತಲುಪಲಿ

## ಜಿಲ್ಲಾ ಯೋಜನಾ ಕೋಶದ ನಿರ್ದೇಶಕ ಬಲಭೀಮ ಕಾಂಬಳೆ ಕರೆ

KP



ನಗರಸಭೆ ಸಭಾಂಗಣದಲ್ಲಿ ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಪ್ರಾಯೋಜಕತ್ವದ ದೀನ ದಯಾಳ ಅಂತ್ಯೋದಯ ಯೋಜನೆ ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನ ಕುರಿತು ಕಾರ್ಯಾಗಾರದಲ್ಲಿ ಬಲಭೀಮ ಕಾಂಬಳೆ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಬೀದರ್

ದೀನ ದಯಾಳ ಅಂತ್ಯೋದಯ ಯೋಜನೆಯ ಲಾಭವು ಜನರಿಗೆ ತಲುಪಿಸುವಲ್ಲಿ ಸಂಬಂಧಪಟ್ಟವರು ಶ್ರಮ ವಹಿಸಬೇಕೆಂದು ಜಿಲ್ಲಾ ಯೋಜನಾ ಕೋಶದ ನಿರ್ದೇಶಕ ಬಲಭೀಮ ಕಾಂಬಳೆ ತಿಳಿಸಿದರು.

ನಗರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಪ್ರಾಯೋಜಕತ್ವದ ದೀನ ದಯಾಳ ಅಂತ್ಯೋದಯ ಯೋಜನೆ ರಾಷ್ಟ್ರೀಯ ನಗರಜೀವನೋಪಾಯಗಳ ಅಭಿಯಾನ ಕುರಿತು ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ ದರು.

ಈ ಸಂದರ್ಭದಲ್ಲಿ ರಾಜ್ಯ ನರಾಭಿವೃದ್ಧಿ ಸಂಸ್ಥೆ ಬೋಧಕರು ಹಾಗು ಕಾರ್ಯಾಗಾರದ ಸಂಯೋಜಕರಾದ

ಕಾರ್ಯಾಗಾರದ ಸಂಯೋಜಕ ಮೈಸೂರಿನ ಅಶೋಕ ಸಿ. ಮಾತನಾಡಿ, ಡಿಎವಾಯ್-ಎನ್‌ಯುಎಲ್‌ಎಂ ವಿವಿಧ ಕಾರ್ಯಕ್ರಮಗಳಲ್ಲಿ ನಗರ ವಸತಿಹೀನರಿಗೆ ಆಶ್ರಯ ಯೋಜನೆ, ನಗರ ಬೀದಿ ವ್ಯಾಪಾರಿಗಳಿಗೆ ಬೆಂಬಲ ಕುರಿತು ಜಿಲ್ಲೆಯ ಸಂಘ-ಸಂಸ್ಥೆಗಳ ಪ್ರತಿನಿಧಿಗಳಿಗೆ ಪ್ರೋಜೆಕ್ಟರ್ ಮೂಲಕ ಮಾಹಿತಿ ನೀಡಿದರು.

ಜಿಲ್ಲಾ ನಗರಾಭಿವೃದ್ಧಿ ಕೋಶ ಸಮುದಾಯ ಅಭಿವೃದ್ಧಿ ತಜ್ಞರಾದ ಭೀಮಣ್ಣಾ ಅವರು ಸಾಮಾಜಿಕ ಕ್ರೋಢೀಕರಣ ಮತ್ತು ಸಂಸ್ಥೆಯ ಅಭಿವೃದ್ಧಿ, ಕೌಶಲ್ಯಗಳ ತರಬೇತಿ ಮೂಲಕ ಉದ್ಯೋಗ ಕುರಿತು ಮಾತನಾಡಿದರು.

ನಗರಸಭೆ ಸಂಘಟನಾಧಿಕಾರಿ ಮಾರ್ಕ್ ಅವರು ಸ್ವಯಂ ಉದ್ಯೋಗ ಕಾರ್ಯಕ್ರಮ ಕುರಿತು ಮಾತನಾಡಿದರು. ಬೀದರ ನಗರಸಭೆ ಸದಸ್ಯರು, ಪೌರಾಯುಕ್ತ ಬಿ. ಬಸಪ್ಪ, ಲೀಡ್ ಬ್ಯಾಂಕ್ ಅಧಿಕಾರಿಗಳು, ಬೀದರ ಡಿಯುಡಿಸಿ ಸಿಡಿಓ ಭೀಮಣ್ಣ, ಎಸ್‌ಎಚ್‌ಜಿ ಸದಸ್ಯರು, ಸಂಘ-ಸಂಸ್ಥೆಗಳ ಸದಸ್ಯರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ನಗರಸಭೆ ಸಮುದಾಯದ ಸಂಘಟನಾಧಿಕಾರಿ ಸ್ವಾಮಿದಾಸ, ಕವಿತಾ ಹುಷಾರೆ, ಮೀನಾ ಬೋರಾಳಕರ್ ಮತ್ತಿತರರು ಇದ್ದರು.

21-7-16

# ಅಂತ್ಯೋದಯ ಯೋಜನೆ ಕಾರ್ಯಾಗಾರ

ವಿಶ್ವವಾಣಿ ಸುದ್ದಿಮನೆ ಬೀದರ್

ಇಲ್ಲಿನ ನಗರ ಸಭೆ ಕಚೇರಿಯಲ್ಲಿ ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಪ್ರಾಯೋಜಕತ್ವದಡಿ ದೀನ ದಯಾಳ ಅಂತ್ಯೋದಯ ಯೋಜನೆಯಡಿ ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನ ಕುರಿತು ಕಾರ್ಯಾಗಾರ ನಡೆಯಿತು.

ಡಿಯುಡಿಸಿ ಯೋಜನಾ ನಿರ್ದೇಶಕ ಬಲಭೀಮ ಕಾಂಬಳೆ ಅವರು ಉದ್ಘಾಟಿಸಿ ಮಾತನಾಡಿದರು. ಯೋಜನೆ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು. ರಾಜ್ಯ ನಗರಾಭಿವೃದ್ಧಿ ಸಂಸ್ಥೆ ಬೋಧಕ, ಕಾರ್ಯಾಗಾರದ ಸಂಯೋಜಕ ಮೈಸೂರಿನ ಅಶೋಕ ಸಿ. ಅವರು ಮಾತನಾಡಿ, ಯೋಜನೆ ಕುರಿತು ಮಾಹಿತಿ ನೀಡಿದರು. ನಗರ ವಸತಿಹೀನರಿಗೆ ಆಶ್ರಯ ಯೋಜನೆ, ನಗರ ಬೀದಿ ವ್ಯಾಪಾರಿಗಳಿಗೆ ಬೆಂಬಲ ಕುರಿತು ತಿಳಿಸಿದರು. ಜಿಲ್ಲಾ ನಗರಾಭಿವೃದ್ಧಿ ಕೋಶದ ಸಮುದಾಯ ಅಭಿವೃದ್ಧಿ ತಜ್ಞ ಭೀಮಣ್ಣಾ ಅವರು ಸಾಮಾಜಿಕ ಕ್ರೋಢೀಕರಣ ಮತ್ತು ಸಂಸ್ಥೆಯ ಅಭಿವೃದ್ಧಿ, ಕೌಶಲ್ಯಗಳ ಕುರಿತು ಮಾತನಾಡಿದರು. ನಗರಸಭೆ ಸಂಘಟನಾಧಿಕಾರಿ ಮಾರ್ಕ್ ಅವರು ಸ್ವಯಂ ಉದ್ಯೋಗ ಕಾರ್ಯಕ್ರಮ ಕುರಿತು ಮಾತನಾಡಿದರು.

ನಗರಸಭೆ ಸದಸ್ಯರು, ಪೌರಾಯುಕ್ತ ಬಿ. ಬಸಪ್ಪಾ, ಲೀಡ್ ಬ್ಯಾಂಕ್ ಅಧಿಕಾರಿಗಳು, ಬೀದರ ಡಿಯುಡಿಸಿ ಸಿಡಿಓ ಭೀಮಣ್ಣ, ಎಸ್‌ಎಚ್‌ಜಿ ಸದಸ್ಯರು, ಸಂಘ-ಸಂಸ್ಥೆಗಳ ಸದಸ್ಯರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು, ನಗರಸಭೆ ಸಮುದಾಯದ ಸಂಘಟನಾಧಿಕಾರಿ ಸ್ವಾಮಿದಾಸ್, ಕವಿತಾ ಹುಷಾರೆ, ಮೀನಾ ಬೋರಾಳಕರ್ ಮತ್ತಿತರರು ಪಾಲ್ಗೊಂಡಿದ್ದರು.

[21-7-2016]